**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್‍ಃ 223/2016**

ಸಿಡಬ್ಲ್ಯೂಃ 17

ಪಿಡಬ್ಲ್ಯೂಃ 9

| | |
|---|---|
| ಸಾಕ್ಷಿಯ ಹೆಸರು | ಯೋಗೇಶ್ ಎಸ್ ಟಿ |
| ತಂದೆಯ ಹೆಸರು | ತಿಪ್ಪೇಶಪ್ಪ |
| ವಯಸ್ಸು | 47 ವರ್ಷ |
| ಉದ್ಯೋಗ | ಆರಕ್ಷಕ ನಿರೀಕ್ಷಕರು ಸಂಚಾರಿ ಪೋಲಿಸ್ ಠಾಣೆ ಬೆಂಗಳೂರು |
| ವಾಸಸ್ಥಳ | ಬೆಂಗಳೂರು |

ಇಂದು ದಿನಾಂಕ 26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ದಿನಾಂಕಃ 13.12.2013 ರಿಂದ 10.06.2017 ರವರೆಗೆ ಹಿರೇಕೆರೂರು ಠಾಣೆಯಲ್ಲಿ ಸಿ ಪಿ ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 31.01.2016 ರಂದು ನಾನು ಚಾಸಾ-16 ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದ್ದು, ನಂತರ ಮಾರನೇಯ ದಿನ ಕೃತ್ಯ ಸ್ಥಳಕ್ಕೆ ಬೇಟಿ ನೀಡಿದ್ದು ಚಾಸಾ-1 ರವರು ತೋರಿಸಿದ ಜಾಗದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಅವರಿಗೆ ನೋಟಿಸನ್ನು ನೀಡಿ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ನಿಪಿ-1 ರಂತೆ ಪಂಚನಾಮೆಯನು ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಹಸ್ತ ನಕಾಶೆಯನ್ನು ತಯಾರಿಸಿದ್ದು ಸದರಿ ಹಸ್ತ ನಕಾಶೆಯಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ-3 ರಂತೆ ಒಂದು ಭಾವಾಚಿತ್ರವನ್ನು ತೆಗೆದಿರುತ್ತೇನೆ.

2. ನಂತರ ಅದೇ 1ನೇ ಆರೋಪಿಯ ಮನೆಯಲ್ಲಿ ಚಾಸಾ-1 ರವರು ತೋರಿಸಿದ ಜಾಗದಲ್ಲಿ ಚಾಸಾ-3 ಮತ್ತು 4 ರವರ ಸಮಕ್ಷಮದಲ್ಲಿ ನಿಪಿ-6 ರಂತೆ 11.30 ರಿಂದ 12.30 ವರೆಗೆ ಪಂಚನಾಮೆಯನ್ನು ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅದನ್ನು ನಿಪಿ-6(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಹಸ್ತ ನಕಾಶೆಯನ್ನು ತಯಾರಿಸಿದ್ದು ಸದರಿ ಹಸ್ತ ನಕಾಶೆಯಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ-7 ರಂತೆ ಭಾವಾಚಿತ್ರವನ್ನು ತೆಗೆದಿರುತ್ತೇನೆ.

3. ನಂತರ ಅದೇ ದಿನ ಚಾಸಾ-4 ರಿಂದ 11 ಹಾಗೂ 16 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಚಾಸಾ-1 ಮತ್ತು 1 ನೇ ಆರೋಪಿಯ ಮದುವೆ ಪೋಟೋ ವಿಡಿಯೋ ಸಿಡಿ ಹಾಗೂ ಲಗ್ನ ಪತ್ರಿಕೆಗಳನ್ನು ನಿಪಿ-8, 9 ರಂತೆ ಚಾಸಾ-5 ರವರಿಂದ ಪಡೆದುಕೊಂಡಿರುತ್ತೇನೆ. ಚಾಸಾ-6 ರವರು ಹಾಜರಪಡಿಸಿದಂತೆ ಮದುವೆ ಸಮಯದಲ್ಲಿ ಖರೀಧಿಸಿದ ಸಾಮಾನಿನ ಪಟ್ಟಿಯ ದೃಡೀಕೃತ ಪಟ್ಟಿ ಮತ್ತು ಎಸ್ ಬಿ ಅಕೌಂಟ್ ಪಾಸ್ ಪುಸ್ತಕಗಳನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ಬಾಂಡೆ ಸಮಾನಿನ ಯದ.ಸ್ಥಿತಿಯ ಪ್ರತಿಯಲ್ಲಿತನ ತನ್ನ ಸಹಿಯನ್ನು ಸಾಕ್ಷಿನೋಡಿ ಗುರತಿಸಿದ್ದು ಅದನ್ನು ನಿಪಿ14 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

4. ನಂತರ ದಿನಾಂಕ 30-03-2016 ರಂದು ಚಾಸಾ-1 ಮತ್ತು 5 ರವರ ಗಾಯ ದ ಪ್ರಮಾಣ ಪತ್ರಗಳನ್ನು ಚಾಸಾ-12 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರದಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-11 ಮತ್ತು 12 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-11(ಬಿ) ಮತ್ತು 12(ಬಿ) ಎಂದು ಗುರುತಿಸಲಾಯಿತು. ನಂತರ ದಿನಾಂಕ 20-04-2016 ರಂದು ಚಾಸಾ-13 ರವರಿಂದ ಕೃತ್ಯ ಸ್ಥಳಗಳ ಉತಾರಗಳನ್ನು ಪಡೆದಕೊಂಡಿರುತ್ತೇನೆ. ಸದರಿ ಉತಾರಗಳಲ್ಲಿನ ತನ್ನ ಸಹಿಯಗಳನ್ನು  ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-15 ಮತ್ತು 16 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-15(ಎ) ಮತ್ತು 16(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕ 30-05-2016 ರಂದು ಚಾಸಾ-14 ರವರಿಂದ ಚಾಸಾ-1 ಮತ್ತು 1 ನೇ ಆರೋಪಿಯ ನಿಖಾನಾಮಾ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯಲ್ಲಿನ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

6. ನಂತರ ದಿಾನಂಕ 16-06-2016 ರಂದು ಆರೋಪಿ 1 ಮತ್ತು 2 ರವರು ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ನನ್ನ ಮುಂದೆ ಹಾಜರಾಗಿದ್ದು ಅವರ ದಸ್ತಗಿರಿ ಪ್ರಕ್ರಿಯೆ ಕೈಗೊಂಡು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ದಿನಾಂಕ 24-06-2016



ರಂದು ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ವಿ ವಿ ಎಂ ವಕೀಲರಿಂದಃ

ನಾನು ದೂರನ್ನು ಪರಿಶೀಲಿಸಿರುತ್ತೇನೆ. ಸದರಿ ದೂರಿನಲ್ಲಿ ಚಾಸಾ-1 ರವರು ತನ್ನ ಸಹಿಯನ್ನು ಮಾಡಿರತ್ತಾರೆ. ನಿಪಿ-1 ರಲ್ಲಿ ಸಹಿ ಇದೆ ಹಾಗೂ ಎಲ್ ಟಿ ಎಂ ಕೂಡ ಇದೆ ಎಂದರೆ ಸರಿ. ನಕಾಶೆಗಳಲ್ಲಿ ಚಾಸಾ-1 ಹಾಗೂ ಆಕೆಯ ಸಹಿಗಳನ್ನು ಪಡೆದುಕೊಂಡಿಲ್ಲದಿದ್ದ ಕಾರಣದಿಂದ ನಾನು ಸದರಿ ನಕಾಶೆಗಳನ್ನು ಅವರ ಸಮಕ್ಷಮದಲ್ಲಿ ಹಾಗೂ ಅವರು ತೋರಿಸಿದ ಜಾಗದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ದಾಖಲೆಗಳನ್ನು ಪಂಚರ ಸಮಕ್ಷಮದಲ್ಲಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ದೂರು ನೀಡಿರುವಂತೆ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷದಾರರ ಹೇಳಿಕೆಗಳನಳ್ನು ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖಾ ಅವಧಿಯಲ್ಲಿ ಆರೋಪಿತರು ಯಾವುದೇ ತಪ್ಪು ಎಸಗಿಲ್ಲ ಎಂದು ನನಗೆ ಕಂಡು ಬಂದ್ದರೂ ಕೂಡ ನಾನು ಆರೋಪಿತರ ವಿರುದ್ಧ ಚಾಸಾ-1 ರವರಿಗೆ ಸಹಾಯ ಮಾಡುವ ಸಲಮಾಗಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.